ಸಂಯುಕ್ತ ಕರ್ನಾಟಕ

**ಬೇಕಾಗಿದ್ದಾರೆ**

ಬೆಂಗಳೂರು, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಪ್ರಸಾರಂಗ ವಿಭಾಗದ ಎಕ್ಸಿಕ್ಯೂಟಿವ್ ಆಗಿ ಕಾರ್ಯನಿರ್ವಹಿಸಲು ಅಭ್ಯರ್ಥಿಗಳು ಬೇಕಾಗಿದ್ದಾರೆ.

ಕನ್ನಡ ಮತ್ತು ಇಂಗ್ಲೀಷ್ ಮಾತನಾಡಬೇಕು
SSLC/PUC ಆಗಿರಬೇಕು
ದ್ವಿಚಕ್ರ ವಾಹನ ಹೊಂದಿರಬೇಕು.
ಆಕರ್ಷಕ ವೇತನ ನೀಡಲಾಗುವುದು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 22-05-2026

ಸಂಪರ್ಕಿಸಿ
9686279696 ಇ-ಮೇಲ್: skhr.nalinig@gmail.com
7338636544 tn.basavaraj50@gmail.com

ದಿವಾಕರ ಭವನ, ರೆಸಿಡೆನ್ಸಿ ರಸ್ತೆ, ಬೆಂಗಳೂರು-560025.


### ಗುಣಮಟ್ಟದ ವಸತಿ ಶಾಲೆ ನಿರ್ಮಾಣಕ್ಕೆ ಒತ್ತಾಯ | 36 ದಿನಗಳಲ್ಲಿ 950 ಕಿ.ಮೀ ಪ್ರಯಾಣ | ಪಂಜಿನ ಮೆರವಣಿಗೆ

# ಜೂ.6ಕ್ಕೆ ಪಾದಯಾತ್ರೆ ಮುಕ್ತಾಯ: ಚಂದ್ರಶೇಖರ್

**ಸಂ ಕ ಸಮಾಚಾರ, ಮಂಡ್ಯ**

ಕರ್ನಾಟಕ ರಾಜ್ಯ ರೈತ ಸಂಘದ ಸಾರಥ್ಯದೊಂದಿಗೆ ಎಸ್‌ಡಿಎಂಸಿ ಸದಸ್ಯರ ನೇತೃತ್ವದಲ್ಲಿ 'ಸರಕಾರಿ ಶಾಲೆ ನನ್ನವ್ವ' ಘೋಷವಾಕ್ಯದೊಂದಿಗೆ ನಡೆಯುತ್ತಿರುವ ಪಾದಯಾತ್ರೆಯು ಜೂ.6ರಂದು ಮುಕ್ತಾಯಗೊಳ್ಳಲಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಎಚ್.ಚಂದ್ರಶೇಖರ್ ತಿಳಿಸಿದರು.

ಜಿಲ್ಲೆಯಲ್ಲಿ ಮುಚ್ಚಿದ 350ರಿಂದ 400 ಶಾಲೆಗಳನ್ನು ಈ ಶೈಕ್ಷಣಿಕ ವರ್ಷದಲ್ಲೇ ತೆರೆಯಬೇಕು. ಜಿಲ್ಲೆ ಎಲ್ಲ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲಿ, ಎಲ್‌ಕೆಜಿಯಿಂದ 5ನೇ ತರಗತಿವರೆಗೆ ಸಿಬಿಎಸ್ಸಿ ದ್ವಿಭಾಷೆ ಶಿಕ್ಷಣ ಮತ್ತು 6ರಿಂದ 12ನೇ ತರಗತಿವರೆಗೆ ನವೋದಯ ಮಾದರಿ ಗುಣಮಟ್ಟದ ವಸತಿ ಶಾಲೆ ನಿರ್ಮಾಣ ಮಾಡುವಂತೆ ಪಾದಯಾತ್ರೆಯ ಮೂಲಕ ಒತ್ತಾಯ ಮಾಡಲಾಗುತ್ತಿದೆ ಎಂದರು.

55 ದಿನಗಳ ಗುರಿಯಲ್ಲಿ ಸಾಗುತ್ತಿರುವ ಪಾದಯಾತ್ರೆಯು 36 ದಿನಗಳಲ್ಲಿ 950 ಕಿ.ಮೀ ಕ್ರಮಿಸಿದೆ. ಜೂ.5ರೊಳಗೆ ಉಳಿದ 550 ಕಿ.ಮೀ. ಪೂರ್ಣಗೊಳಿಸಲಾಗುವುದು. ಜೂ.6ರಂದು ಇಂಡುವಾಳು ಗ್ರಾ.ಪಂನಿಂದ ನಗರದ ಜಯಚಾಮರಾಜೇಂದ್ರ ವೃತ್ತದವರೆಗೆ ಜಿಲ್ಲಾದ್ಯಂತ ಬರುವ ಸರಕಾರಿ ಶಾಲೆಯ ಅಭಿಮಾನಿಗಳಿಂದ ಪಂಜಿನ ಮೆರವಣಿಗೆ ನಡೆಸಿ ಪಾದಯಾತ್ರೆ ಮುಕ್ತಾಯ ಮಾಡಲಾಗುವುದು ಎಂದು ಹೇಳಿದರು.




ಮೈಶುಗರ್ ಸಕ್ಕರೆ ಕಾರ್ಖಾನೆಯಲ್ಲಿ ನುರಿಸಿದ ಕಬ್ಬಿಗೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡುವುದಾಗಿ ಹೇಳಲಾಗಿದ್ದು, ಇನ್ನೂ ರೈತರ ಖಾತೆಗೆ ಜಮೆ ಮಾಡಲಾಗಿಲ್ಲ. ಕಾರ್ಖಾನೆ ವ್ಯಾಪ್ತಿಗೆ ಬರುವ 3 ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಕರೆತಂದು ಈ ಬಗ್ಗೆ ಹಾಗೂ ಕಾರ್ಖಾನೆಯ ಸ್ಥಿತಿಗತಿಗಳ ಬಗ್ಗೆ ಜೂನ್ ಅಂತ್ಯದಲ್ಲಿ ಜಿಲ್ಲೆಯ ಎಲ್ಲ ರೈತ ಸಂಘಗಳು, ರೈತ ಹಿತರಕ್ಷಣಾ ಸಮಿತಿ, ಕಬ್ಬು ಬೆಳೆಗಾರರ ಸಂಘ, ಒಪ್ಪಿಗೆದಾರರ ಸಂಘಟನೆಗಳು ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ಮಾಡಲಾಗುವುದೆಂದರು.

ಕನ್ನಂಬಾಡಿ ಕಟ್ಟೆಯನ್ನು ಮೈಸೂರು ರಾಜರು ರೈತರ ಬೆಳೆಗಾಗಿ ನಿರ್ಮಿಸಿದ್ದಾರೆ. ಅದರಿಂದ ಬೆಂಗಳೂರಿಗೆ 6ನೇ ಹಂತದ ನೀರು ಕೊಂಡೊಯ್ಯುವ ಯೋಜನೆ ಕೈಗೊಂಡಿದ್ದು, ಇದನ್ನು ಕೂಡಲೇ ಕೈಬಿಡಬೇಕು. ಇಲ್ಲವಾದಲ್ಲಿ ಜಿಲ್ಲಾದ್ಯಂತ ತೀವ್ರ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಶಿವಳ್ಳಿ ಚಂದ್ರಶೇಖರ್, ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿ, ಜಿಲಾ ಮುಖಂಡರಾದ ಕೆ.ಆರ್.ತೇಜಸ್, ಮಹಮ್ಮದ್ ಹಮೀಮ್ ಇದ್ದರು.

## ಚುಟುಕು ಸುದ್ದಿ

### 25ರೊಳಗೆ ಪುರಸ್ಕಾರಕ್ಕೆ ನೋಂದಣಿ

**ಬೆಳಕವಾಡಿ:** ಬೆಳಕವಾಡಿ ಗ್ರಾಮ ಪಂಚಾಯಿತಿ ವತಿಯಿಂದ ಎಸ್ ಎಸ್‌ಎಲ್ ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮೇ ತಿಂಗಳ ಕೊನೆಯವಾರ ನಡೆಸಲು ಸಾಮಾನ್ಯಸಭೆಯಲ್ಲಿ ತೀರ್ಮಾನಿಸಲಾಗಿದೆ.

ಗ್ರಾಮ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯಸಭೆಯಲ್ಲಿ ಬೆಳಕವಾಡಿ ಗ್ರಾಮದ ಆರು ವಾರ್ಡ್‌ಗಳ ವಿದ್ಯಾರ್ಥಿಗಳನ್ನು ಸ್ಮರಣಿಕೆ ನೀಡಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ನಿರ್ಧಾರವನ್ನು ಕೈಗೊಂಡಿದ್ದು, ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಶೇಕಡ 85ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಮೇ 25ರೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಬೆಳಕವಾಡಿ ಗ್ರಾಮ ಪಂಚಾಯಿತಿ ಕಚೇರಿಗೆ ಸಲ್ಲಿಸಬೇಕೆಂದು ಗ್ರಾ.ಪಂ.ಅಧ್ಯಕ್ಷ ವೆಂಕಟಪ್ಪ ಹಾಗೂ ಪಿಡಿಒ ಸಿ.ರುದ್ರಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕುಂತೂರು: 25 ಲೀಟರ್ ಅಕ್ರಮ ಮದ್ಯ ವಶ

**ಹಲಗೂರು** : ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಶೇಖರಿಸಿಟ್ಟಿದ್ದ ಮನೆಯ ಮೇಲೆ ಶದಾಳಿ ಮಾಡಿದ ಹಲಗೂರು ಪೊಲೀಸರು ಸುಮಾರು 18.600 ಸಾವಿರ ರೂ. ಮೌಲ್ಯದ 25 ಲೀಟರ್ ಅಕ್ರಮ ಮದ್ಯವನ್ನು ವಶಪಡಿಸಿಕೊಂಡಿದ್ದಾರೆ.

ಸಮೀಪದ ಕುಂತೂರು ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂಬ ದೂರು ಕೇಳಿ ಬಂದಿತ್ತು. ಮಾಹಿತಿ ಪಡೆದ ಹಲಗೂರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ಮತ್ತು ಸಿಬ್ಬಂದಿ ಪಂಚಲಿಂಗೇಗೌಡ ಅವರ ಮನೆಯ ಮೇಲೆ ದಾಳಿ ಮಾಡಿದ್ದು, ಪರವಾನಿಗೆ ಇಲ್ಲದೇ, ಹೆಚ್ಚಿನ ಬೆಲೆಗೆ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡಲು ಶೇಖರಿಸಿ ಇಟ್ಟಿದ್ದ ವಿವಿಧ ಕಂಪನಿಯ 25 ಲೀಟರ್ ಮದ್ಯ ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದೇಸೀ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡಿ: ಸಚ್ಚಿದಾನಂದ

### ಕಾಳಮ್ಮ ಹಬ್ಬದ ಪ್ರಯುಕ್ತ ಕುಸ್ತಿ ಆಯೋಜನೆ

**ಸಂ ಕ ಸಮಾಚಾರ, ಶ್ರೀರಂಗಪಟ್ಟಣ**

ತಾಲೂಕಿನ ಮಹದೇವಪುರ ಗ್ರಾಮದಲ್ಲಿ ಕಾಳಮ್ಮ ಹಬ್ಬದ ಪ್ರಯುಕ್ತ 25 ಜೊತೆ ನಾಡ ಕುಸ್ತಿ ಆಯೋಜನೆ ಮಾಡಲಾಗಿತ್ತು.

ಕುಸ್ತಿ ಪಂದ್ಯಾವಳಿಗೆ ಬಿಜೆಪಿ ಮುಖಂಅಡ ಇಂಡವಾಳು ಸಚ್ಚಿದಾನಂದ ಚಾಲನೆ ನೀಡಿ ಮಾತನಾಡಿ, ಇತ್ತೀಚಿನ ದಿನದಲ್ಲಿ ದೇಸಿ ಕ್ರೀಡೆಗಳು ನಶಿಸುತ್ತಿವೆ. ಸರ್ಕಾರ ಗ್ರಾಮೀಣ ಕ್ರೀಡೆಗಳಿಗೆ ಆದ್ಯತೆ ನೀಡಿ ಇಂತಹ ಕುಸ್ತಿ ಕ್ರೀಡೆಗಳಿಗೆ ಪ್ರೋತ್ಸಾಹಿಸಬೇಕು. ಆಗ ದೇಶಿಯ ಕ್ರೀಡೆಗಳು ಉಳಿಸಲು ಸಾಧ್ಯವಾಗುತ್ತದೆ ಎಂದರು.

ಗ್ರಾಮದ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಬಸವರಾಜು, ತಾಪಂ ಮಾಜಿ ಸದಸ್ಯ ಕಾಳೇಗೌಡ ಸೇರಿದಂತೆ ಗ್ರಾಮದ ಯಜಮಾನರು ಕ್ರೀಡಾ ಪಟುಗಳು ಗ್ರಾಮಸ್ಥರು ಹಾಜರಿದ್ದರು.

ರಾಜ್ಯದ ಹಲವು ಜಿಲ್ಲೆಗಳಿಂದ ಹಾಗೂ ವಿವಿಧ ರಾಜ್ಯ ಮಟ್ಟದಿಂದ ಹೆಸರಾಂತ ಕುಸ್ತಿ ಪಟುಗಳು ಆಗಮಿಸಿ ಕುಸ್ತಿ ಪಂದ್ಯದಲ್ಲಿ ಭಾಗವಹಿಸಿದರು. ಜೋಡಿಯಲ್ಲಿ ವಿಜೇತ ಕುಸ್ತಿ ಪಟುಗಳಿಗೆ ನಗದು ಹಾಗೂ ಪಾರಿತೋಷಕ ಪ್ರಮಾಣ ಪತ್ರವನ್ನು ವಿತರಿಸಲಾಯಿತು.





# ವಿಜೃಂಭಣೆಯ ಗಂಧೋತ್ಸವ

**ಸಂ ಕ ಸಮಾಚಾರ, ಶ್ರೀರಂಗಪಟ್ಟಣ**

ಹಜರತ್ ಟಿಪ್ಪು ಸುಲ್ತಾನ್ ಶಹೀದ್ ಅವರ 234ನೇ ಉರುಸ್‌ನ ಗಂಧೋತ್ಸವ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಮಂಡ್ಯ, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಕಡೆಗಳಿಂದ ಮುಸ್ಲಿಂ ಭಾಂದವರು ಆಗಮಿಸಿ ಟಿಪ್ಪು ಸಂದಲ್ ಮೆರವಣಿಗೆಗೆ ಮೆರಗು ತಂದರು.

ಪಟ್ಟಣದ ಜಾಮೀಯಾ ಮಸೀದಿಯಿಂದ ಟಿಪ್ಪು ವಕ್ಫ್ ಎಸ್ಟೇಟ್ ಕಮಿಟಿ ಸದಸ್ಯರು ಮತ್ತು ಅವರ ಧರ್ಮಗುರುಗಳು ಗಂಧದ ಬಿಂದಿಗೆ ಹೊತ್ತು ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಿದರು.

ಪುರಸಭೆಯ ವೃತ್ತದಲ್ಲಿ ಪುರಸಭೆ ಸದಸ್ಯರು ಸೇರಿ ಪವಿತ್ರ ಗಂಧದ ಸಂದಲ್‌ಗೆ ಪುಷ್ಪಾರ್ಚನೆ ನೆರವೇರಿಸಿದರು. ರಸ್ತೆಯುದ್ದಕ್ಕೂ ಟಿಪ್ಪು ಸುಲ್ತಾನ್ ಭಾವಚಿತ್ರಗಳು, ಯುವಕರು ವಿವಿಧ ವೇಶ ಭೂಷಣ ಹಾಗೂ ಹುಲಿ ಪಟ್ಟೆಯ ಬಾವುಟಗಳು ಸೇರಿದಂತೆ ತಮಟೆ ಸದ್ದಿನ ಧ್ವನಿವರ್ಧಕಗಳು ಮೊಳಗುತ್ತಿದ್ದವು, ಬಾಣ ಬಿರುಸುಗಳು ಕುದುರೆ ಸವಾರಿ, ಕತ್ತಿವರಸೆ, ಟಿಪ್ಪು ವೇಶಧಾರಿಗಳು, ಟಿಪ್ಪು ಬಾವುಟಗಳು ರಂಜಿಸುತ್ತಿದ್ದವು. ಒಂದು ಕಿಮೀ ವರೆಗೆ ಮಸೀದಿಯಂತಹ ಕಲಾ ಕೃತಿಗಳನ್ನು ವಾಹನದ ಮೇಲೆ ಇಟ್ಟು ಮೆರವಣಿಗೆಯಲ್ಲಿ ನಡೆಸಲಾಯಿತು.

**ಮೆರವಣಿಗೆ**

**ಪಟ್ಟಣದ ಜಾಮೀಯಾ ಮಸೀದಿಯಿಂದ ಹೊರಟ ಗಂಧೋತ್ಸವ ಮೆರವಣಿಗೆ ಗಂಜಾನ ಟಿಪ್ಪು ಸಮಾದಿ ಗುಂಬಸ್‌ವರೆಗೂ ತೆರಳಿತು. ನಂತರ ಧರ್ಮಗುರುಗಳು ಟಿಪ್ಪು ಸಮಾಧಿ ಮೇಲೆ ಹೂವಿನ ಚಾದರ ಹೊದಿಸಿ ಗಂಧದ ಲೇಪನ ಮಾಡಿ ಪ್ರಾರ್ಥಿಸಿದರು.**

**ಬಿಗಿ ಭದ್ರತೆ:** ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿಇ ತಿಮ್ಮಯ್ಯ, ಡಿವೈಎಸ್‌ಪಿ ಕೃಷ್ಣಕುಮಾರ್ ನೇತೃತ್ವದಲ್ಲಿ ಇತರ ಭಾಗಗಳಿಂದ ಪೊಲೀಸರನ್ನು ಹೆಚ್ಚಿನ ರೀತಿಯಲ್ಲಿ ನಿಯೋಜನೆ ಮಾಡಲಾಗಿತ್ತು. ಜಾಮೀಯಾ ಮಸೀದಿಯಿಂದ ಗುಂಬಸ್‌ವರೆಗೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿಭದ್ರತೆ ಕಲ್ಪಿಸಲಾಗಿತ್ತು.

# ಗ್ರಾಮೀಣ ಸೊಗಡಿನ ಲೋ ನವೀನ ಸಿನಿಮಾ ಬಿಡುಗಡೆ

**ಸಂ ಕ ಸಮಾಚಾರ, ಭಾರತೀನಗರ**

ಅಪ್ಪಟ ಗ್ರಾಮೀಣ ಸೊಗಡಿನ ಲೋ ನವೀನ ಸಿನಿಮಾ ಬಿಡುಗಡೆ ಹಿನ್ನಲೆಯಲ್ಲಿ ಪ್ರೇಕ್ಷಕರು ಮತ್ತು ಅಭಿಮಾನಿಗಳು ಹಾಸ್ಯನಟ ಮರಸಿಂಗನಹಳ್ಳಿ ಮಲ್ಲರಾಜು ಅವರನ್ನು ನಗರದ ಸುಮ ಚಿತ್ರಮಂದಿರದಲ್ಲಿ ಅಭಿನಂದಿಸಿ ಗೌರವಿಸಲಾಯಿತು.

ಮಲ್ಲರಾಜು ಮಾತನಾಡಿ, ಈ ಚಿತ್ರ ಅಪ್ಪಟ ಗ್ರಾಮೀಣ ಸೊಗಡಿನಿಂದ ಕೂಡಿದೆ. ಈ ಹಾಸ್ಯ ಸಿನಿಮಾವನ್ನು ನೋಡುವ ಮೂಲಕ ಹೊಸ ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕು.


ಗ್ರಾಮೀಣ ಪ್ರದೇಶದ ಗಂಡುಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ. ಹೆಣ್ಣುಮಕ್ಕಳ ಮನಸ್ಥಿತಿ ಏನು ಎಂಬುದರ ಬಗ್ಗೆ ತಿಳಿಯಲು ಈ ಸಿನಿಮಾವನ್ನು ನೋಡಲೇ ಬೇಕಾಗಿದೆ ಎಂದರು.

ಈ ಸಿನಿಮಾದಲ್ಲಿ ಯಾವುದೇ ಅಶ್ಲೀಲ ಪದಗಳಿಲ್ಲ. ಹೊಡೆದು ಬಡಿದಾಡುವಂತಹದ್ದು ಇಲ್ಲ. ನೈಜ್ಯವಾದ ಸಿನಿಮಾವಾಗಿದೆ. ಪ್ರೇಕ್ಷಕರದಿಂದ ಉತ್ತಮ ಪ್ರತಿಕ್ರಿಯೆ ದೊರಕುತ್ತಿದೆ. ಕುಟುಂಬ ಸಮೇತವಾಗಿ ನೋಡಿ ಹಾರೈಸಬೇಕೆಂದು ಹೇಳಿದರು.

ನಂತರ ದೇವರಹಳ್ಳಿ ಗ್ರಾಮದ ಮುಖಂಡ ವೆಂಕಟೇಶ್ ಮಾತನಾಡಿ, ಲೋ ನವೀನ ನಾಯಕ ನಟ ಮೂಲತಃ ಮಂಡ್ಯದವರಾಗಿದ್ದು, ಈ ಸಿನಿಮಾದಲ್ಲಿ ಹಾಸ್ಯಕಲಾವಿದರಾದ ಕ್ಯಾತಘಟ್ಟದ ಅಭಿಜಿತ್, ಮಾರಸಿಂಗನಹಳ್ಳಿ ಮಲ್ಲರಾಜು ಅವರು ನಟಿಸಿದ್ದಾರೆ.

ಈ ಸಿನಿಮಾವನ್ನು ನೋಡುವ ಮೂಲಕ ಶತದಿನೋತ್ಸವ ಆಚರಿಸಲಿ ಎಂದು ಹಾರೈಸಿದರು.

ಇದೇ ವೇಳೆ ಪರಿಸರ ಜಾಗೃತಿ ವೇದಿಕೆಯ ತಾಲ್ಲೂಕು ಅಧ್ಯಕ್ಷ ಅಣ್ಣೂರು ಸತೀಶ್, ಕ್ಯಾತಘಟ್ಟ ಬೋರೇಗೌಡ, ಮಾರಸಿಂಗನಹಳ್ಳಿ ಶಿವನಂಜಪ್ಪ, ಮುಟ್ಟನಹಳ್ಳಿ ರಮೇಶ್, ಸೀಮೆಂಟ್ ಅಂಗಡಿ ರಘು, ಬೋರೇಗೌಡ, ತೋಟಶೆಟ್ಟಿ ಸೇರಿದಂತೆ ಹಲವರಿದ್ದರು




**ಮಾನ್ಯ ಪಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಾಗಮಂಗಲ**
**ಕ್ರಿಮಿನಲ್ ಮಿಸ್ ನಂ. 41 : 2026**

ಅರ್ಜಿದಾರರು : 1. ಪುಟ್ಟರಾಜು ಬಿನ್ ಲೇಟ್ ಕುಳ್ಳೇಗೌಡ, 60 ವರ್ಷ 2. ನಾಗರಾಜು ಬಿನ್ ಲೇಟ್ ಕುಳ್ಳೇಗೌಡ, 50 ವರ್ಷ 3. ಧನಂಜಯ ಬಿನ್ ಲೇಟ್ ಕುಳ್ಳೇಗೌಡ, 45 ವರ್ಷ 4. ಕೀರ್ತಿ ಬಿನ್ ಲೇಟ್ ಮಂಜುನಾಥ, 33 ವರ್ಷ ಎಲ್ಲರೂ ನಾಗಲಾಪುರ ಗ್ರಾಮ, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

-ವಿರುದ್ಧ-

ಎದುರುದಾರರು : ತಹಶೀಲ್ದಾರ್ ರವರು, ನಾಗಮಂಗಲ ತಾಲ್ಲೂಕು.

**ಪ್ರಕಟಣೆ**

ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ, ನಾಗಲಾಪುರ ಗ್ರಾಮದ ವಿಳಾಸದ ರವರು ಮೃತ ನಾಗಮ್ಮ ಕೋಂ ಲೇಟ್ ಮಂಜುನಾಥ ರವರಿಗೆ 1ನೇ ಅರ್ಜಿದಾರರು ಭಾವನಾಗಬೇಕು, 2ನೇ ಮತ್ತು 3ನೇ ಅರ್ಜಿದಾರರು ಮೈದುನಾಗಬೇಕು ಮತ್ತು 4ನೇ ಅರ್ಜಿದಾರರು ಮಗಳಾಗಬೇಕು. ಮೃತ ನಾಗಮ್ಮ ಕೋಂ ಲೇಟ್ ಮಂಜುನಾಥ ರವರು ದಿನಾಂಕ:-02-07-2004 ರಂದು ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ, ನಾಗಲಾಪುರ ಗ್ರಾಮದಲ್ಲಿ ಮರಣ ಹೊಂದಿರುತಾರೆ. ಈ ಸಂಬಂಧ ಅರ್ಜಿದಾರರು ಮೇಲ್ಕರೆಡ ರವರ ಮರಣ ದೃಡೀಕರಣಪತ್ರ ಪಡೆಯಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಅರ್ಜಿಯನ್ನು ನಾಗಮಂಗಲದ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಸದರಿ ಪ್ರಕರಣದ ಸುನಾವಣೆಯು ದಿನಾಂಕ: 18-06-2026 ರಂದು ಬೆಳಿಗ್ಗೆ 11 ಗಂಟೆಗೆ ಇದ್ದು, ಸದರಿ ಅರ್ಜಿದಾರರ ಕೋರಿಕೆಯ ವಿಚಾರವನ್ನು ವಿರೋದಿಸುವವರು ಹಾಗೂ ಸದರಿ ಮರಣಕ್ಕೆ ಸಂಬಂಧಪಟ್ಟಂತೆ ಯಾರಿಗಾದರೂ ಆಕ್ಷೇಪಣೆಗಳಿದ್ದರೆ ಅಂತಹವರು ಮೇಲ್ಕಂಡ ದಿನಾಂಕದಂದು ಘನ ನ್ಯಾಯಾಲಯದ ಮುಂದೆ ನೀವಾಗಲಿ ಅಥವಾ ನಿಮ್ಮ ಪರ ವಕೀಲರಾಗಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ. ದಿನಾಂಕ 28/04/2026 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರ್
ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಾಗಮಂಗಲ.
ವಾದಿ ಪರ ವಕೀಲರು
**ಟಿ.ಕೆ.ರಾಮೇಗೌಡ**



**ನೈಋತ್ಯ ರೈಲ್ವೆ**

ಟೆಂಡರು ಸೂಚನೆ ಸಂ.: B-SG-Proj-Kavach-Survey
ದಿನಾಂಕ: 16.04.2026 ರ ಮೇಲಿನ
ತಿದ್ದುಪಡಿ ಪ್ರಕಟಣೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ (ತಿದ್ದುಪಡಿಯ ನಂತರ) |
| --- | --- |
| ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಮೇಲಿನ ಸಮ ತೋಲನ ಮಾರ್ಗಗಳಲ್ಲಿ ಯುಹೆಚ್ ಎಫ್ ನ ಸಂವಹನ ಆಧಾರದೊಂದಿಗೆ ಕವಚ್ ಅನ್ನು ಒದಗಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ವೈಮಾನಿಕ ವೀಡಿಯೊಗ್ರಫಿ / ಲಿಡಾರ್ ಸಮೀಕ್ಷೆ – 456 ಕಿಮೀ. | ರೂ. 75,89,002.80 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.05.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಯೋಜನೆ/ ಬೆಂಗಳೂರು
PUB/124/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways


# ತ್ಯಾಜ್ಯಕ್ಕೆ ಬೆಂಕಿ; ಸಾರ್ವಜನಿಕರಿಗೆ ಆತಂಕ

**ಶ್ರೀರಂಗಪಟ್ಟಣ:** ತಾಲೂಕಿನ ಮೊಗರಹಳ್ಳಿ (ಮಂಟಿ) ಹೊರಹೊಲಯದಲ್ಲಿ ಅಪಾರ ಪ್ರಮಾಣದ ಕೈಗಾರಿಕಾ ತ್ಯಾಜ್ಯವನ್ನು ಸುರಿದಿದ್ದು, ಅದಕ್ಕೆ ಬೆಂಕಿ ಹಚ್ಚುತ್ತಿರುವ ಘಟನೆ ಸಾರ್ವಜನಿಕರಲ್ಲಿ ಆತಂಕಮೂಡಿಸಿದೆ.

ರಾತ್ರಿ ವೇಳೆ ತ್ಯಾಜ್ಯಕ್ಕೆ ಬೆಂಕಿ ಹಚ್ಚುತ್ತಿರುವುದರಿಂದ ದಟ್ಟವಾದ ವಿಷಕಾರಿ ಹೊಗೆ ಸುತ್ತಮುತ್ತಲಿನ ಗ್ರಾಮಗಳಿಗೆ ವ್ಯಾಪಿಸುತ್ತಿದೆ. ಇದರ ಪರಿಣಾಮವಾಗಿ ಜನರು ಉಸಿರಾಟದ ತೊಂದರೆ, ಕಣ್ಣುರಿ, ಗಂಟಲು ಉರಿ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ ಎಂದು ಸ್ಥಳೀಯರು ದೂರಿದ್ದಾರೆ.

ಕೈಗಾರಿಕಾ ತ್ಯಾಜ್ಯ ದಹನದಿಂದ ಪರಿಸರ ಮಾಲಿನ್ಯ ಹೆಚ್ಚುತ್ತಿದ್ದು, ಮಕ್ಕಳ ಹಾಗೂ ವಯೋವೃದ್ಧರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ತ್ಯಾಜ್ಯ ಸುರಿದು ಬೆಂಕಿ ಹಚ್ಚುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಇದಲ್ಲದೆ, ಪರಿಸರ ಇಲಾಖೆ ಹಾಗೂ ಸ್ಥಳೀಯ ಆಡಳಿತ ತಕ್ಷಣ ಕ್ರಮ ಕೈಗೊಂಡು ಈ ರೀತಿಯ ಅಕ್ರಮ ತ್ಯಾಜ್ಯ ವಿಲೇವಾರಿಯನ್ನು ತಡೆಗಟ್ಟಬೇಕು ಎಂಬ ಒತ್ತಾಯವೂ ವ್ಯಕ್ತವಾಗಿದೆ. ಸಾರ್ವಜನಿಕರ ಆರೋಗ್ಯ ಹಾಗೂ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುವಂತೆ ಜನರು ಮನವಿ ಮಾಡಿದ್ದಾರೆ.

# ಪ್ರತಿಭಟನಾಕಾರರಿಂದ ಶಾಸಕ ಉದಯ್‌ಗೆ ಕಪ್ಪು ಬಾವುಟ ಪ್ರದರ್ಶನ



**ಸಂ ಕ ಸಮಾಚಾರ, ಮದ್ದೂರು**

ತಾಲ್ಲೂಕಿನ ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಗೆ ಸೇರಿಸಿರುವುದನ್ನು ವಿರೋಧಿಸಿ 146 ದಿನಗಳಿಂದ ಪ್ರತಿಭಟನೆ ಮಾಡುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಶಾಸಕರು ಬಂದಿಲ್ಲದ ಕಾರಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾವುದೇ ಸ್ಥಳದಲ್ಲಿ ಜನಪ್ರತಿನಿಧಿಗಳಿಗೆ ಪ್ರವೇಶವನ್ನು ನಿಷೇಧಿಸಲಾಗಿದ್ದು, ಅವರು ಬಂದರೆ ತಡೆಯುತ್ತೇವೆ ಎಂದು ಗ್ರಾಮದ ಹೊರವಲಯದಲ್ಲಿ ನಾಮಫಲಕಗಳನ್ನು ಹಾಕಲಾಗಿದೆ.

ಆದರೂ ಗೆಜ್ಜಲಗೆರೆ ಕೈಗಾರಿಕಾ ಪ್ರದೇಶಕ್ಕೆ ಗುದ್ದಲಿ ಪೂಜೆ ನೆರವೇರಿಸಲು ಆಗಮಿಸಿದ ಶಾಸಕ ಉದಯ್ ಅವರ ವಿರುದ್ಧ ಪ್ರತಿಭಟನಾಕಾರರು ಘೋಷಣೆ ಕೂಗಿ, ಕಪ್ಪು ಬಾವುಟ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಡಿವೈಎಸ್ಪಿ ಯಶವಂತ, ಸಿಪಿಐ ನವೀನಗೌಡ ನೇತೃತ್ವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದ ಹಾಗೆ ಬೀಗಿ ಪೊಲೀಸ್ ಬಂದು ಬಸ್ ಏರ್ಪಡಿಸಲಾಗಿತ್ತು.

ಪ್ರತಿಭಟನೆ ನೇತೃತ್ವವನ್ನು ರೈತ ಹೋರಾಟಗಾರರಾದ ಸುನಂದ ಜಯರಾಮ್, ಜಿ.ಎ.ಶಂಕರ್, ಲಿಂಗಪ್ಪ, ಮೋಹನ್, ಯೋಗೇಶ್ ಇತರರು ಭಾಗವಹಿಸಿದ್ದರು.


ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು
ಜಾಹೀರಾತಿಗಾಗಿ ಸಂಪರ್ಕಿಸಿ : Mobile : 9902008429
E-mail : skadvtblr@gmail.com



**ಬಹಿರಂಗ ಹರಾಜು**

ಮೆ : ಕಾವೇರಿ ಬ್ಯಾಂಕರ್ಸ್, ಪಾನ್ ಬ್ರೋಕರ್ಸ್, #ಚಂದಾಪುರ ಸರ್ಕಲ್, ಬನಹಳ್ಳಿ ರೋಡ್, ಬೆಂಗಳೂರು 560099 ಗಿರವಿ ಅಂಗಡಿಯಲ್ಲಿ ತಾ: 21/05/2020 ರಿಂದ 03/04/2021 ಅವಧಿಯಲ್ಲಿ ಗಿರವಿ ಇಟ್ಟು, ವಾಯಿದೆ ಮೀರಿದ್ದರು ಸಹ ಬಿಡಿಸದೆ ಇರುವ ವಸುಗಳನ್ನು (ಸೂಚನೆ:-ಕರ್ನಾಟಕ ಋಣ ಪರಿಹಾರ ಕಾಯ್ದೆಯಡಿಯಲ್ಲಿ ಬರುವ ವಸುಗಳನ್ನು ಹೊರತು ಪಡಿಸಿ) ಕೆ.ಪಿ.ಬಿ ಆಕ್ಟ್ 20(1)ನೇ ಪ್ರಕಾರ ಬಹಿರಂಗ ಹರಾಜು ಮೂಲಕ ತಾ: 21/05/2026 ರಂದು 10:00:AM ಗಂಟೆಗೆ ಮೇಲ್ಕಂಡ ಗಿರವಿದಾರರ ವಿಳಾಸದಲ್ಲಿ ಶ್ರೀ ಬಿ. ಅಶೋಕ್ ಕುಮಾರ್ (ಸರ್ಕಾರಿ ಮಾನ್ಯತೆ ಪಡೆದ ಹರಾಜುದಾರರು) ನಂ. 43, ಸೆಪ್ಪಿಂಗ್ಸ್ ರೋಡ್, ಬೆಂಗಳೂರು-560001, ಇವರು ಹರಾಜು ಮಾಡುವರು.


**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ, ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು

# ಶನೇಶ್ವರ ದೇವಾಲಯದಲ್ಲಿ ಅದ್ಧೂರಿ ಶನಿಜಯಂತಿ ಆಚರಣೆ

**ಪಾವಗಡ:** ಸುಪ್ರಸಿದ್ಧ ಶನೇಶ್ವರ ದೇವಾಲಯದಲ್ಲಿ ಶನಿಜಯಂತಿ ಕಾರ್ಯಕ್ರಮದ ಅಂಗವಾಗಿ ವಿಶೇಷ ಹೋಮಗಳು ಶ್ರದ್ಧಾಭಕ್ತಿಯಿಂದ ಜರುಗಿದವು.

ಬೆಳಿಗ್ಗೆ 8ರಿಂದ ಅಭಿಷೇಕ, ನವಗ್ರಹ ಆರಾಧನೆ, ಸರ್ವತೋಭದ್ರ ಮಂಡಳ ಆರಾಧನೆ, ಸಪ್ತಮಾತೃಕಾ ಪೂಜೆ, ಮೂಲಮಂತ್ರ, ಜಪ, ದೀಕ್ಷಾಹೋಮ, ವಿಷ್ಣು ಸಹಸ್ರಹೋಮ, ವಿಷ್ಣು ಸಹಸ್ರ ನಾಮಾರ್ಚನೆ, ಉಪನಿಷತ್ ಪಾರಾಯಣ, ಮಹಾಮಂಗಳಾರತಿ ಹಾಗೂ ಪೂರ್ಣಾಹುತಿ ನಡೆದು ಸಾಯಂಕಾಲ ವಿಶೇಷವಾಗಿ ಪುಷ್ಪಯಾಗ ವೇದಪರಾಯಣದ ಮೂಲಕ ನಡೆದವು. ಪಟ್ಟಣದ ವನಿತೆಯರು ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು.

ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳು, ನಿರ್ದೇಶಕರುಗಳು, ಅಭಿಮಾನಿಗಳು, ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ ಶನೇಶ್ವರ ಕೃಪೆಗೆ ಪಾತ್ರರಾದರು.


बैंक ऑफ़ बड़ौदा Bank of Baroda

**ಬ್ಯಾಂಕ್ ಆಫ್ ಬರೋಡ**

ಸಿಟಿ ಮಾರ್ಕೆಟ್ ಶಾಖೆ (8948)
ನಂ. 18/1, 1ನೇ ಮಹಡಿ, ರಂಗಸ್ವಾಮಿ ದೇವಸ್ಥಾನ ಬೀದಿ, ಚಿಕ್ಕಪೇಟೆ, ಬೆಂಗಳೂರು, ಕರ್ನಾಟಕ – 560 053 , Tel: 080-22873757, 080-22873561,
E-mail:vjcmba@bankofbaroda.co.in

**ಸ್ಥಿರಾಸ್ತಿಯ ಮಾರಾಟಕ್ಕಾಗಿ ಮಾರಾಟ ಸೂಚನೆ**

ಅಪೆಂಡಿಕ್ಸ್ - IV ಎ [ನಿಯಮ 6(2) ಮತ್ತು 8(6)ರ ನಿಬಂಧನೆಯ ಅನ್ವಯ]

**ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ನಿಯಮ 6(2) ಮತ್ತು 8(6)ರ ನಿಬಂಧನೆಗಳನ್ನು ಓದಿಕೊಂಡಂತೆ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಅನ್ವಯ ಆಸ್ತಿಯ ಇ-ಹರಾಜು ಮಾರಾಟ ಸೂಚನೆ**

ನಿರ್ದಿಷ್ಟವಾಗಿ ಸಾಲಗಾರರಿಗೆ/ಅಡಮಾನುದಾರರಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್ ಆದ ಬ್ಯಾಂಕ್ ಆಫ್ ಬರೋಡ, ಬೆಂಗಳೂರು , ಇವರಿಗೆ ಅಡಮಾನ /ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಬ್ಯಾಂಕ್ ಆಫ್ ಬರೋಡ , ಬೆಂಗಳೂರು ಇದರ ಅಧಿಕೃತ ಅಧಿಕಾರಿಯವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅವುಗಳನ್ನು 'ಎಲ್ಲಿ ಹೇಗಿದೆಯೊ ಹಾಗೆ' , 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಮತ್ಯಾವುದಾದರೂ ಅಲ್ಲಿ ಇದ್ದಲ್ಲಿ' ಆಧಾರದ ಮೇಲೆ ಮಾರಾಟ ಮಾಡಲಾಗುವುದು. ಸಾಲಗಾರರ/ಜಾಮೀನುದಾರರ / ಭದ್ರತಾ ಸ್ವತ್ತುಗಳ ವಿವರಗಳನ್ನು /ಬಾಕಿ ಮೊತ್ತ ಮೀಸಲು ಬೆಲೆ/ ಇಎಂಡಿ ಮತ್ತು ಬಿಡ್‌ಗುಣಾಂಕ/ ಇ-ಹರಾಜು ಮಾರಾಟದ ದಿನಾಂಕ ಮತ್ತುಸಮಯದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| ಕ್ರ ಸಂ | ಸಾಲಗಾರರ/ಜಾಮೀನುದಾರರ ಹೆಸರು ಮತ್ತು ವಿಳಾಸ | ಆಸ್ತಿಗಳ ವಿವರ | ಒಟ್ಟು ಬಾಕಿ | ಇ-ಹರಾಜು ಮಾರಾಟದ ದಿನಾಂಕ ಮತ್ತು ಸಮಯ | ಮೀಸಲು ಬೆಲೆ ಇಎಂಡಿ ಮತ್ತು ಬಿಡ್ ಗುಣಾಂಕ | ಸ್ವಾಧೀನದ ಸ್ವರೂಪ (ರಚನಾತ್ಮಕ/ ಭೌತಿಕ ) | ಆಸ್ತಿ ವೀಕ್ಷಣಾ ದಿನಾಂಕ ಮತ್ತು ಸಮಯ |
| --- | --- | --- | --- | --- | --- | --- | --- |
| 1 | 1. ಮೆ. ರಿಧಿ ಎಂಟರ್‌ಪ್ರೈಸಸ್, ಪ್ರತಿನಿಧಿಸುವರು ಇದರ ಮಾಲೀಕರಾದ ಶ್ರೀ ಜಗದೀಶ್, ಎಂ. ಎಸ್. S/o ಶ್ರೀ ಶಿವಣ್ಣ ಗೌಡ, ನಂ. 201, ಕೆ. ವಿ. ಗಾರ್ಡನ್, 2ನೇ ಮಹಡಿ, 1ನೇ ಅಡ್ಡ ರಸ್ತೆ, ಬನಗಿರಿನಗರ, ಬೆಂಗಳೂರು – 560 085.<br>2. ಶ್ರೀಮತಿ ಶೃತಿ ಜಗದೀಶ್, W/o. ಶ್ರೀ ಜಗದೀಶ್ ಎಂ. ಎಸ್., ಮನೆ ವಿಳಾಸ : ನಂ. 201, ಕೆ. ವಿ. ಗಾರ್ಡನ್, 2ನೇ ಮಹಡಿ, 1ನೇ ಆಡ್ಡ ರಸ್ತೆ, ಬನಗಿರಿನಗರ, ಬೆಂಗಳೂರು – 560 085. | ಆಸ್ತಿ ನಂ. 1 : ಶ್ರೀ ಜಗದೀಶ್ ಎಂ. ಎಸ್. ಬಿನ್. ಶ್ರೀ ಶಿವಣ್ಣ ಗೌಡ ಇವರ ಹೆಸರಿನಲ್ಲಿರುವ ಆಸ್ತಿ. ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು,ಬೆಳ್ಳೂರು ಹೋಬಳಿ, ತಿರುಮಲಪುರಗ್ರಾಮ, ಇಲ್ಲಿರುವ ಆಸ್ತಿಯ ಇ- ಸ್ವತ್ತು (ಖಾತಾ ) ನಂ. 152100500602120005, ಆಸ್ತಿ ನಂ. 99, ಒಟ್ಟು ಆಳತೆ 6677.25 ಚದರ ಮೀ ಟರ್ ಆಸ್ತಿಯಲ್ಲಿ 1821.07 ಚದರ ಮೀಟರ್ ( ಪೂರ್ವದಿಂದ ಪಶ್ಚಿಮಕ್ಕೆ ಅಸಮಾನ ನಿವೇಶನ, ಉತ್ತರದಿಂದ ದಕ್ಷಿಣಕ್ಕೆ ಅಸಮಾನ ಅಳತೆ ) ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ : ಬೀಚನಹಳ್ಳಿ ಗಡಿ ( ಸರ್ವೆ ನಂ. 42/5), ಪಶ್ಚಿಮಕ್ಕೆ : L.Hi 2(ಸರ್ವೆ ನಂ. 42/5), ಉತ್ತರಕ್ಕೆ: ಬೀಚನಹಳ್ಳಿ ಗಡಿ ( ಸರ್ವೆ ನಂ. 42/3), ದಕ್ಷಿಣಕ್ಕೆ: L.Hi 2(ಸರ್ವೆ ನಂ. 24/3),<br>ಆಸ್ತಿ ನಂ. 2 : ಶ್ರೀಮತಿ ಶೃತಿ ಜಗದೀಶ್, W/o. ಶ್ರೀ ಜಗದೀಶ್ ಎಂ. ಎಸ್.,ಇವರ ಹೆಸರಿನಲ್ಲಿರುವ ಆಸ್ತಿ. ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು,ಬೆಳ್ಳೂರು ಹೋಬಳಿ, ಬೀಚನಹಳ್ಳಿ ಗ್ರಾಮ, ಇಲ್ಲಿ ಪರಿವರ್ತಿತ ಸರ್ವೆ ನಂ. 42/2, ಹೊಸ ಆಸ್ತಿ (ಖಾತಾ) ನಂ. 25/45ಎ, ಇ- ಸ್ವತ್ತು (ಖಾತಾ ) ನಂ. 152100500602320010 ಆಳತೆ 1928.65 ಚದರ ಮೀಟರ್‌ನಲ್ಲಿ L ಆಕಾರದಲ್ಲಿರುವ ಜಮೀನು ಆಳವಡಿಸಿರುವ ನಕ್ಷೆಯಲ್ಲಿ ಹಸಿರು ಬಣ್ಣದಿಂದ ಗುರುತಿಸಲಾಗಿದೆ. ಇದರ ಚಕ್ಕುಬಂದಿ : ಪೂರ್ವಕ್ಕೆ : ಆಸ್ತಿಯ ಉಳಿದ ಭಾಗ, ಪಶ್ಚಿಮಕ್ಕೆ : ಬಿಪಿಸಿಎಲ್ ಪೆಟ್ರೋಲ್ ಬಂಕ್‌ನ ಸ್ವಾಧೀನದಲ್ಲಿರುವ ಆಸ್ತಿಯ ಉಳಿದ ಭಾಗ , ಉತ್ತರಕ್ಕೆ: ಎನ್‌ಹೆಚ್ 75 ರಸ್ತೆ, ದಕ್ಷಿಣಕ್ಕೆ: ಆಸ್ತಿಯ ಉಳಿದ ಭಾಗ, | ರೂ.93,66,878.82 (ರೂಪಾಯಿ ತೊಂಬತ್ತ ಮೂರು ಲಕ್ಷ ಅರವತ್ತಾರು ಸಾವಿರದ ಎಂಟು ನೂರ ಎಪ್ಪತ್ತೆಂಟು ಮತ್ತು ಪೈಸೆ ಎಂಬತ್ತೆರಡು ಮಾತ್ರ) ಮತ್ತು ಬಡ್ಡಿ ಹಾಗೂ ಕಾನೂನು ವೆಚ್ಚ | 04.06.2026 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ<br>ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ 04.06.2026 (ಸಂಜೆ 6.00 ಗಂಟೆ) | ಆಸ್ತಿ ನಂ. 1 : ರೂ.51,84,000/- ರೂ. 5,18,400/- ರೂ.25,000/-<br>ಆಸ್ತಿ ನಂ. 2 : ರೂ.88,29,000/- ರೂ. 8,82,900/- ರೂ.25,000/- | ಭೌತಿಕ ಸ್ವಾಧೀನ | ಅಧಿಕೃತ ಅಧಿಕಾರಿಯವರಲ್ಲಿ ಮುಂಚಿತವಾಗಿ ಸಮಯ ನಿಗದಿಪಡಿಸಿಕೊಂಡು |

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳನ್ನು ನೀಡಿರುವ ಲಿಂಕ್‌ಗಳಲ್ಲಿ ಅಂದರೆ https://www.bankofbaroda.in/e-auction.htm and online auction portal https://baanknet.com ನಲ್ಲಿ ವೀಕ್ಷಿಸಬಹುದು.ಮತ್ತು ಸಂಭಾವ್ಯ ಬಿಡ್ದರ್‌ಗಳು ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸುವ ಸಂಖ್ಯೆ 080-22873561 & Mobile 9742413938

ದಿನಾಂಕ : 15.05.2026
ಸ್ಥಳ : ಬೆಂಗಳೂರು

ಸಹಿ/-
ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ, ಸಿಟಿ ಮಾರ್ಕೆಟ್ ಶಾಖೆ


# ಸೋಮೇಶ್ವರನಿಗೆ ವಿಶೇಷ ಪೂಜೆ

**ಸಂ ಕ ಸಮಾಚಾರ, ಹಲಗೂರು**

ಬಾದಾಮಿ ಅಮಾವಾಸ್ಯೆ ಪ್ರಯುಕ್ತ ಹಲಗೂರಿನ ಭೀಮನದಿ ತೀರದಲ್ಲಿರುವ ಸೋಮೇಶ್ವರ ದೇವಸ್ಥಾನ, ಮುತ್ತತ್ತಿ ರಸ್ತೆಯಲ್ಲಿರುವ ಕಾಳಿಕಾಂಬ ದೇವಸ್ಥಾನ, ಕೊಲ್ಲಾಪುರದ ಶಂಭುಲಿಂಗೇಶ್ವರ ದೇವಸ್ಥಾನ ಹಾಗೂ ಮುತ್ತತ್ತಿ ಗ್ರಾಮದಲ್ಲಿ ನೆಲೆಸಿರುವ ಆರಾಧ್ಯ ದೇವ ಮುತ್ತತ್ತಿ ರಾಯನ ದೇವಸ್ಥಾನದಲ್ಲಿ ವಿಶೇಷ ಪೂಜಾ ಪುನಸ್ಕಾರಗಳು ನಡೆದವು.

ಮುತ್ತತ್ತಿ ರಸ್ತೆಯಲ್ಲಿರುವ ಹಲಗೂರಿನ ಸೋಮೇಶ್ವರ ದೇವಸ್ಥಾನದಲ್ಲಿ ಪ್ರತಿ ತಿಂಗಳು ಅಮಾವಾಸ್ಯೆ ದಿನಗಳಲ್ಲಿ ಸೋಮೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ನಡೆಸಿ ವಿಶೇಷ ಅಲಂಕಾರ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ. ಹಲಗೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥಗಳಿಗಾಗಿ ಪ್ರಾರ್ಥಿಸುತ್ತಾರೆ.

ಬಾದಾಮಿ ಅಮಾವಾಸ್ಯೆಯಂದು ಶನೇಶ್ವರ ಜಯಂತಿಯು ಇರುವುದರಿಂದ ಶಿವನ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ ಎಂದು ಅರ್ಚಕ ತೇಜ್ ಕುಮಾರ್ ತಿಳಿಸಿದರು.

ಭಕ್ತರು ತಮ್ಮಿಷ್ಟಾರ್ಥವನ್ನು ನೆರವೇರಿಸುವಂತೆ ದೇವರಲ್ಲಿ ಪ್ರಾರ್ಥಿಸಿ ಹುಲಿ ವಾಹನ ಸೇವೆ, ಶ್ರೀ ಆಂಜನೇಯ ವಾಹನ ಸೇವೆ ನೆರವೇರಿಸಿ ಪೂಜೆ ಸಲ್ಲಿಸಿದರು.



